4

# “ಅಗೋ, ದೇವರು ನೇಮಿಸಿದ ಕುರಿ”

## (1:19-51)

*ಸಾರಾ, ಪ್ಲೇನ್ ಆ್ಯಂಡ್ ಟಾಲ್* ಎಂಬ ಅದ್ಭುತಕರವಾದ ಮಕ್ಕಳ ಪುಸ್ತಕವು ಸಮುದ್ರ ತೀರವನ್ನು ಬಿಟ್ಟು ಪ್ರೇಯರಿಗೆ ಒಂದು ರೀತಿಯ ಮೇಯಿಲ್ ಆರ್ಡ್ರ್ ಬ್ರೈಡ್‌ದಂತೆ ಹೋಗಲು ತೀರ್ಮಾನಿಸಿಕೊಂಡ ಮೈನದ ಒಬ್ಬ ಮಹಿಳೆಯ ಕಥೆಯನ್ನು ಹೇಳುತ್ತದೆ. ವಿಧುರನಾದ ಒಬ್ಬ ಪ್ರೇಯರಿಯ ಫಾರ್ಮರನ ಹೆಂಡತಿಯಾಗುವ ಮೊದಲು, ಆಕೆ ಅವನೊಂದಿಗೆ ಪತ್ರ ವ್ಯವಹಾರ ಮಾಡಿದಳು ಮತ್ತು ಅವನ ಯುವ ಮಗನೊಂದಿಗೂ ಮಗಳೊಂದಿಗೂ ಸಂಪರ್ಕ ಬೆಳಸಿಕೊಂಡಳು. ಆಕೆಯು ಅವರಿಗೆ ತನ್ನ ಬೆಕ್ಕಿನ ಬಗ್ಗೆ ಮತ್ತು ಸಮುದ್ರದ ಬಗ್ಗೆ ಹೇಳಿದಳು. ಮತ್ತು ಮಕ್ಕಳು ಆಕೆಗೆ, ಆಕೆ ತನ್ನ ಕೂದಲಕ್ಕೆ ಹೆರಳು ಹಾಕುವಳೋ, ಹಾಡುವಳೋ ಎಂದು ಕೇಳಿ ಬರೆದರು, ತಾನು ಎಂದೂ ಸಂದರ್ಶಿಸದೇ ಇದ್ದ ಕುಟುಂಬದ ಭಾಗವಾಗಲು ಪಶ್ಚಿಮದ ಕಡೆಗೆ ತನ್ನ ಪ್ರಯಾಣ ಮಾಡಲು ಸಾರಳಿಗೆ ಸಮಯ ಹತ್ತಿರವಾದಾಗ ಆಕೆ ಹೀಗೆ ಬರೆದಳು,

> ಪ್ರೀಯ ಜಾಕೋಬ
>
> ನಾನು ಟ್ರೇನಿನಿಂದ ಬರುತ್ತೇನೆ. ನಾನು ಹಳದಿ ಟೊಪ್ಪಿಗೆಯನ್ನು ಹಾಕಿ ಕೊಂಡಿರುತ್ತೇನೆ, ನಾನು ಸಾಧಾರಣವಾದವಳೂ ಎತ್ತರವಾದವಳೂ ಆಗಿದ್ದೇನೆ.
>
> ಸಾರಾ[1]

ಸಾರಾ ತಲುಪಿದ ದಿನ ಸಂದರ್ಶಿಸಲು ನಿಲ್ದಾಣಕ್ಕೆ ಹೋಗುವಾಗ ಅವರಲ್ಲಿದ್ದ ಕುತೂಹಲವನ್ನು ನೀನು ಕಲ್ಪಿಸಬಹುದೋ? ಅವರ ಮನಸ್ಸುಗಳಲ್ಲಿ ಏನಾಗುತ್ತಿರ ಬಹುದು? ನಾಟಕದಲ್ಲಿ ಒಳಗೊಂಡಿದ್ದ ನಾಲ್ಕು ಜನರಿಗೆ ಏನನ್ನು ನಿರೀಕ್ಷಿಸಬಹುದು ಎಂಬ ವಿಚಾರವೇ ಇರಲಿಲ್ಲ.

ಯೋಹಾನ 1:19-51, ನಮ್ಮ ಪಠ್ಯವು ಅದೇ ಅನಿಶ್ಚಿತತೆಯ ಹಾಗೂ ಗಲಿಬಿಲಿಯ ಭಾವನೆಯೊಂದಿಗೆ ಪ್ರಾರಂಭಿಸುತ್ತದೆ. ಈ ಘಟನೆಗಳಲ್ಲಿ ಒಳಗೊಂಡಿರುವ ಜನರಿಗೆ ಮಹತ್ವದ್ದು, ಅದ್ಭುತವಾದದ್ದು ಆದ ಒಂದು ಸಂಗತಿಯು ಸಂಭವಿಸಲಿಕ್ಕಿತ್ತು ಆದರೆ ಅವುಗಳಿಗೆ ಹೇಗೆ ಪ್ರತಿಕ್ರಿಯೆ ತೋರಿಸ ಬೇಕೆಂಬುದಕ್ಕೆ ಅವರಿಗೆ ಅನಿಶ್ಚಿತತೆಯಿತ್ತು. ಕುತೂಹಲದಿಂದ ಕಾದುಕೊಂಡಿದ್ದ ಲೋಕದೊಳಗೆ ಯೇಸುವು ಪ್ರವೇಶಿಸಿದನು; ಆ ಸಂಗತಿ ಯಾವುದೆಂಬುದನ್ನು ಜನರು ನಿಶ್ಚಿತವಾಗಿ ತಿಳಿಯದೇ ಇದ್ದದ್ದು ಕೇವಲ ಸಮಸ್ಯೆಯಾಗಿತ್ತು. ಯೋಹಾನನ ಸುವಾರ್ತೆಯ ಈ ಭಾಗವು ಹೋರಾಡುತ್ತಿದ್ದ ಪ್ರತ್ಯಕ್ಷದರ್ಶಿ ಸಾಕ್ಷಿಗಳ ದೃಷ್ಟಿಕೋನಗಳ ಮುಖಾಂತರ ಈ ನಜರೇತಿನ ಯೇಸುವು ನಿಜವಾಗಿಯೂ ಯಾರಾಗಿದ್ದಾನೆಂಬುದನ್ನು ತೋರಿಸಲು ಪ್ರಾರಂಭಿಸುತ್ತದೆ.

### ಸ್ನಾನಿಕನಾದ ಯೋಹಾನನ ಸಾಕ್ಷಿ (1:19-34)

ಯೊರ್ದನ್ ಹೊಳೆಯಲ್ಲಿ ಯೇಸುವು ಬಾಪ್ತಿಸ್ಮ ಹೊಂದುವದಕ್ಕೆ ಬರುವ ಸಮಯದಲ್ಲಿ ಆಗಲೇ ಸ್ನಾನಿಕನಾದ ಯೋಹಾನನು ಯೂದಾಯದಲ್ಲಿ ಸಾಕಷ್ಟು ಉದ್ರೇಕವನ್ನೆಬ್ಬಿಸಿದ್ದನು. ಅವನ ಒರಟಾದ ಪ್ರವಾದಿಯಂಥ ನೋಟವು ಮತ್ತು ದೇವರ ರಾಜ್ಯವು ಹತ್ತಿರವಾಯಿತು ಎಂಬ ಅವನ ಪ್ರವಾದಿಯಂಥ ಬಲವಾದ ಪ್ರಸಂಗಿಸುವಿಕೆಯು ಯೆರೂಷಲೇಮಿನಿಂದಲೂ,

ಹಾಗೆಯೇ "ಯೂದಾಯ ಮತ್ತು ಯೊರ್ದನಿನ ಸುತ್ತಲು ಎಲ್ಲಾ ಜಿಲ್ಲೆಗಳಿಂದ" ಯೋಹಾನನು ದೀಕ್ಷಾಸ್ನಾನ ಮಾಡಿಸುತ್ತಿದ್ದ ಸ್ಥಳಕ್ಕೆ ಜನರನ್ನು ಎಳೆತಂದಿತು (ಮತ್ತಾಯ 3:5). ಬಹುಶ ಮೆಸ್ಸೀಯನು ತನ್ನ ಅನುಯಾಯಿಗಳನ್ನು ಅರಣ್ಯದಲ್ಲಿ ಕೂಡಿಸುವನೆಂದು ಅನೇಕರು ನಿರೀ ಕ್ಷಿಸಿದ್ದರಿಂದ[2] ಸ್ನಾನಿಕನಾದ ಯೋಹಾನನು ನಿಜವಾಗಿಯು ಯಾರಾಗಿದ್ದಾನೆಂದು ಊಹಿಸಲಿಕ್ಕೆ ಪ್ರಾರಂಭಿಸಿದರು. ಒಮ್ಮೆ ಕುತೂಹಲವು ಸಾಕಷ್ಟು ಹೆಚ್ಚಾದಾಗ ಯೆಹೂದ್ಯರು[3] ಯೋಹಾನನು ತನ್ನ ಬಗ್ಗೆ ಏನನ್ನು ಹೇಳುತ್ತಿದ್ದಾನೆ ಎಂಬುದನ್ನು ಕಂಡು ಕೊಳ್ಳಲಿಕ್ಕೆ ಯೆರೂಸಲೇಮಿನಿಂದ.ಕೆಲವು ಯಾಜಕರನ್ನೂ ಲೇವಿಯರನ್ನೂ ಕಳುಹಿಸಿದರು (1:19).

ತನ್ನ ಪ್ರಸಂಗಿಸುವಿಕೆ ಮತ್ತು ತನ್ನ ಸಂವಾದಗಳಲ್ಲಿ ಎರಡರಲ್ಲಿಯ ಸ್ನಾನಿಕನಾದ ಯೋಹಾನನು ತಾನು ಹೇಳಿದ್ದರ ಅರ್ಥವೇನೆಂಬುದರ ಬಗ್ಗೆ ಯಾವ ಸಂಶಯವನ್ನೂ ಬಿಡದ ಯಥಾರ್ಥವಾದ ಮನುಷ್ಯನಾಗಿದ್ದಾನೆಂದು ತೋರುತ್ತದೆ. ಯೆರೂಸಲೇಮಿನಿಂದ ಬಂದವರಿಗೆ "ನಾನು ಕ್ರಿಸ್ತನಲ್ಲ" ಎಂದು ಹೇಳಿದನು (1:20). ಇನ್ನೂ ಮುಂದೆ ಹೋಗಿ, ತಾನು ಎಲೀಯನಲ್ಲ[4] ಇಲ್ಲವೇ ಮೋಶೆಯಿಂದ ಹೇಳಲ್ಪಟ್ಟ ಪ್ರವಾದಿಯೂ ಅಲ್ಲ ಎಂದು ಘೋಷಿಸಿದನು (1:21; ನೋಡಿರಿ ಧರ್ಮೋಪದೇಶಕಾಂಡ 18:15). ಸ್ವಲ್ಪದರಲ್ಲಿ ಅವರು ನಿರೀಕ್ಷಿಸುತ್ತಿದ್ದ ಒಬ್ಬಾತನು ತಾನಾಗಿರುವದಿಲ್ಲವೆಂದು ಅವನು ಹೇಳಿದನು. ಯೆಶಾಯ 40:3ನ್ನು ಉಲ್ಲೇಖಿಸಿ, ತನನ್ನು, "ಕರ್ತನ ದಾರಿಯನ್ನು ನೆಟ್ಟಗೆ ಮಾಡಿರಿ ಎಂದು ಅಡವಿಯಲ್ಲಿ ಕೂಗುವವನ ಶಬ್ದವಿದೆ" ಎಂಬಂತೆ ಗುರುತಿಸಿಕೊಂಡನು (1:23). ಅವನು ಕೇವಲ ಸಂದೇಶವಾಹಕನೂ ಮುಂದೂತನೂ ಆಗಿದ್ದನು. ಯೋಹಾನನ ನಂತರ ಯೋಹಾನನು ಯಾರ ಕೆರಗಳ ಬಾರವನ್ನು ಬಿಚ್ಚಲು ಯೋಗ್ಯನಾಗಿರುವದಿಲ್ಲವ್ರೋ ಆತನು ಬರಲಿಕ್ಕಿದ್ದಾನೆ.

ಸ್ನಾನಿಕನಾದ ಯೋಹಾನನು ತನ್ನ ಮಾತಿಗೂ, ತನ್ನ ಸೇವೆಗೂ ಸತ್ಯತೆಯುಳ್ಳ ವನಾಗಿದ್ದನು. ಮರುದಿನ ಯೇಸುವು ಬರುತ್ತಿರುವದನ್ನು ನೋಡಿ, "ಅಗೋ, ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು!" (1:29) ಎಂದು ಯೋಹಾನನು ಹೇಳಿದನು. ಯೇಸುವಿನ ಬಾಪ್ತಿಸ್ಮವು ಈ ಸುವಾರ್ತೆಯಲ್ಲಿ ದಾಖಲೆಯಾಗಿರದಿದ್ದರೂ, ಯೋಹಾನನು ದೇವರಾತ್ಮವು ಆಕಾಶದಿಂದ ಪಾರಿವಾಳದಂತೆ ಇಳಿದು ಬಂದು ಯೇಸುವಿನ ಮೇಲೆ ನೆಲೆಗೊಂಡಿದ್ದನ್ನು ನೋಡಿದನೆಂದು ಘಟನೆಯನ್ನು ಬಹಿರಂಗ ಪಡಿಸುವಲ್ಲಿ ಅದನ್ನು ಸೂಚಿಸಿದ್ದಾನೆ (1:32). ಆಗ ಆತನು, "ಈತನೇ ದೇವಕುಮಾರನೆಂದು" ಒಪ್ಪಿಕೊಂಡನು (1:34). ಸ್ನಾನಿಕನಾದ ಯೋಹಾನನ ದೃಷ್ಟಿಯಲ್ಲಿ, ಯೇಸುವು ದೇವರ ಕುಮಾರನಲ್ಲಿ ಒಬ್ಬನಾಗಿರುವುದಿಲ್ಲ; ಆತನು ದೇವರ ಕುಮಾರನಾಗಿದ್ದನು, ಆತನು ದೇವರ ಒಂದು ಕುರಿಯಾಗಿರಲಿಲ್ಲ; ಆತನು ದೇವರ ಕುರಿಯಾಗಿದ್ದನು.

## ಅಂದ್ರೇಯನ ಸಾಕ್ಷಿ (1:35-42)

ಮರುದಿನ ಯೋಹಾನನು ಪುನಃ ಯೇಸುವಿನ ಕಡೆಗೆ "ದೇವರ ಕುರಿ" ಎಂದು ತನ್ನ ಶಿಷ್ಯರಿಗೆ ತೋರಿಸಿದನು (1:36), ಆದುದರಿಂದ ಅವರು ಯೋಹಾನನ್ನು ಬಿಟ್ಟು ಯೇಸುವನ್ನು ಹಿಂಬಾಲಿಸಿದರು. ಅವರಲ್ಲಿ ಒಬ್ಬನು, ಅಂದ್ರೇಯನು,[5] ಯೇಸುವನ್ನು "ರಬ್ಬಿ" ಎಂದು ಕರೆ ಯಲು ಪ್ರಾರಂಭಿಸಿದನು; ವಿದ್ಯಾರ್ಥಿ - ಗುರು ಸಂಬಂಧದಲ್ಲಿ ಆತನನ್ನು ಹಿಂಬಾಲಿಸಲು ತಾನು ಸಿದ್ಧನಾಗಿದ್ದೇನೆಂದು ಅವನು ತೋರಿಸಿದನು (1:38). ಹೀಗಿದ್ದರೂ, ಹಿಂಬಾಲಿಸುವದಕ್ಕೆ ಅವನ ಕಾರಣವು, ಯೇಸುವಿನ ಜ್ಞಾನದಿಂದ ಪ್ರಭಾವಿತನಾಗಿದ್ದದಂತಲು ಹೆಚ್ಚು ಆಳವಾ ದದ್ದಾಗಿತ್ತು. ಅವನು ಕೂಡಲೇ ತನ್ನ ಸಹೋದರ ಸೀಮೋನ್ ಪೇತ್ರನನ್ನು ಕಂಡುಕೊಂಡು, "ಮೆಸ್ಸೀಯನು ನಮಗೆ ಸಿಕ್ಕಿದನು" (1:41) ಎಂದು ಹೇಳಿದನು. ಪಠ್ಯದಲ್ಲಿ ಈ ಅಂಶದಿಂದ, ಯೇಸುವು ದೇವರ ಕುರಿ, ದೇವರ ಕುಮಾರ, ರಬ್ಬಿ ಮತ್ತು ಮೆಸ್ಸೀಯ ಆಗಿರುವನೆಂದು ಘೋಷಿಸಲ್ಪಟ್ಟಿತು.

## ಫಿಲಿಪ್ಪನ ಮತ್ತು ನತಾನಯೇಲನ ಸಾಕ್ಷಿ (1:43-49)

"ನನ್ನನ್ನು ಹಿಂಬಾಲಿಸು" (1:43) ಎಂಬ ಜೀವನ ಬದಲಾಯಿಸುವ ಮಾತುಗಳಿಂದ ಯೇಸುವು ಫಿಲಿಪ್ಪನನ್ನು ಕರೆದನು. ಆಮೇಲೆ ಫಿಲಿಪ್ಪನು ನತಾನಯೇಲನನ್ನು ಕಂಡುಕೊಂಡನು ಹಾಗೂ ಮೋಶೆಯಿಂದಲೂ, ಪ್ರವಾದಿಗಳಿಂದಲೂ ಹೇಳಲ್ಪಟ್ಟಾತನನ್ನು ತಾವು ಕಂಡುಕೊಂಡಿದ್ದೇವೆಂದು ಹೇಳಿದನು; ಆತನು ನಜರೇತಿನ ಯೇಸು, ಯೋಸೇಫನ ಮಗನು (1:45). "ನಜರೇತಿನಿಂದ ಒಳ್ಳೇಯದೇನಾದರೂ ಬರುವುದೋ?" (1:46) ಎಂದು ತಿರಸ್ಕಾರದಿಂದ ಅವನು ಕೇಳಿದಾಗ ನತಾನಯೇಲನ ಪ್ರತಿಕ್ರಿಯೆಯು ಅಷ್ಟು ಆಸಕ್ತಿಯುಳ್ಳದ್ದಾಗಿ ಕಾಣಲಿಲ್ಲ. ಅವನು ಪ್ರಭಾವಿತನಾಗಿರದಿದ್ದರೂ, ನತಾನಯೇಲನು ಯೇಸುವನ್ನು ನೋಡಲು ಫಿಲಿಪ್ಪನೊಂದಿಗೆ ಹೋದನು. ನತಾನಯೇಲನು ಆತನನ್ನು ಸಮೀಪಿಸಿದಾಗ, "ಇಗೋ, ಇವನು ನಿಜವಾದ ಇಸ್ರಾಯೇಲನು, ಇವನಲ್ಲಿ ಕಪಟವಿಲ್ಲ" (1:47) ಎಂದು ಯೇಸು ಹೇಳಿದನು. ಯೇಸುವು ಅವನನ್ನು ಹೇಗೆ ತಿಳಿದಿದ್ದನು ಎಂದು ನತಾನಯೇಲನು ಆಶ್ಚರ್ಯಪಟ್ಟನು, ಆದುದರಿಂದ ಕೇಳಿದನು. ಯೇಸುವಿನ ಉತ್ತರವು ನತಾನಯೇಲನ ಅಂತರ್ಯವನ್ನು ಕಲುಕಿಸಿತು. "ಫಿಲಿಪ್ಪನು ನಿನ್ನನ್ನು ಕರೆಯುವದಕ್ಕಿಂತ ಮುಂಚೆ ನೀನು ಆ ಅಂಜೂರದ ಮರದ ಕೆಳಗೆ ಇದ್ದಾಗ ನಿನ್ನನ್ನು ನೋಡಿದೆನು" (1:48). ಬಹುಶಃ ನತಾನಯೇಲನು ಅಂಜೂರದ ಮರದ ಕೆಳಗೆ ಧ್ಯಾನಿಸುತ್ತಿದ್ದಿರ ಬಹುದು ಇಲ್ಲವೇ ಪ್ರಾರ್ಥಿಸುತ್ತಿದ್ದಿಬಹುದು, ಮತ್ತು ಯೇಸುವಿನ ಮಾತುಗಳು ನತಾನಯೇಲನ ಹೃದಯದ ನಿಕಟವಾದ ವಿಚಾರಗಳನ್ನು ಆತನು ತಿಳಿದವನಾಗಿದ್ದಾನೆಂಬುದನ್ನು ಸೂಚಿಸುತ್ತದೆ. ಅವನ ಬದಲಾವಣೆಗೆ ಯಾವುದೇ ಕಾರಣವಿದ್ದರೂ, ನತಾನಯೇಲನು ಕಠಿಣವಾದ ತಿರಸ್ಕಾರದಿಂದ ಆಸಕ್ತಿಯುಳ್ಳ ಶಿಷ್ಯನಾಗಿ ಕೂಡಲೇ ಮಾರ್ಪಟ್ಟನು. ಉಲ್ಲಸಿತನಾಗಿ ಅತೀ ಮಹತ್ವದ ಅರಿಕೆ ಮಾಡಿದನು: "ಗುರುವೇ, ನೀನು ದೇವಕುಮಾರನು ಸರಿ; ನೀನೆ ಇಸ್ರಾಯೇಲಿನ ಅರಸನು" (1:49).

ಯೇಸುವಿನ ಮತ್ತು ಪ್ರತ್ಯಕ್ಷದರ್ಶಿಗಳ ಮಧ್ಯದಲ್ಲಿಯ ಈ ಪ್ರಥಮ ಸಂದರ್ಶಿಸುವಿಕೆಗಳಲಲ್ಲಾ, ಜನರು ಈ ಮನುಷ್ಯನ ಬಗ್ಗೆ ತಾವು ನಂಬಲಿಕ್ಕೆ ಬಂದಿದ್ದನ್ನು ವಿವರಿಸಲು ಪದಗಳಿಗಾಗಿ ಹುಡುಕಾಡುತ್ತಿದ್ದರೆಂದು ತೋರುತ್ತದೆ. ತಮ್ಮಲ್ಲಿ ಕೇವಲ ಐದು ಬಣ್ಣದ ಕಡ್ಡಿಗಳಿರುವಾಗ ಸುಂದರವಾದ ಸೂರ್ಯಾಸ್ತದ ಚಿತ್ರಕ್ಕೆ ಬಣ್ಣಹಾಕಲು ಪ್ರಯತ್ನಿಸುವವರಂತೆ ಅದು ಇತ್ತು ("ಕುರಿ," "ದೇವರ ಕುಮಾರ," "ರಬ್ಬಿ," "ಮೆಸ್ಸೀಯ," "ಅರಸ"). ಅವರು ನೋಡಿದ್ದ ಪ್ರಕಾಶಕ್ಕೆ ಅವರಲ್ಲಿ ಯಾರು ನ್ಯಾಯ ಮಾಡಲಾಗಲಿಲ್ಲ. ಅತಿ ಮಹತ್ವದ ಅರಿಕೆಯು ಇನ್ನೂ ಬರಬೇಕಾಗಿತ್ತು, ಯಾಕೆಂದರೆ ಯೇಸುವು ತಾನು ಯಾರಾಗಿದ್ದಾನೆ ಎಂಬುದನ್ನು ಅನಂತರದಲ್ಲಿ ತನ್ನ ಸ್ವಂತ ಮಾತುಗಳಲ್ಲಿ ಸೂಚಿಸಿದನು (4:26).

## ಯೇಸುವಿನ ಸಾಕ್ಷಿ (1:50, 51)

ಫಿಲಿಪ್ಪನು ಅವನನ್ನು ಕರೆಯುವ ಮೊದಲು ನತಾನಯೇಲನನ್ನು ಅಂಜೂರದ ಮರದ ಕೆಳಗೆ ನೊಡಿದ್ದೇನೆಂದು ಯೇಸು ಹೇಳಿದ್ದಕ್ಕೆ ನತಾನಯೇಲು ಆಸಕ್ತಿಯುಳ್ಳ ಪ್ರತಿಕ್ರಿಯೆಯು ಯೇಸುವನ್ನು ಒಂದು ರೀತಿಯಲ್ಲಿ ಆಶ್ಚರ್ಯಪಡುವಂತೆ ಮಾಡಿದಂತೆ ತೋರುತ್ತದೆ. ಅದಕ್ಕಿಂತಲೂ ಹೆಚ್ಚಾಗಿ ಪ್ರಭಾವವುಳ್ಳ ಸೂಚಕ ಕಾರ್ಯಗಳನ್ನು ನೋಡುವಿಯೆಂದು ಯೇಸುವು ಅವನಿಗೆ ತಿಳಿಸಿದನು. "ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ; ಪರಲೋಕವು ತೆರೆದಿರುವದನ್ನೂ ಮನುಷ್ಯ ಕುಮಾರನ ಮೇಲೆ ದೇವ ದೂತರು ಏರಿಹೋಗುತ್ತಾ ಇಳಿದುಬರುತ್ತಾ ಇರುದನ್ನೂ ನೋಡುವಿರಿ ಎಂದು ಹೇಳಿದನು" (1:51). ಪರಲೋಕವು ತೆರೆಯಲ್ಪಡುವುದೆಂದು ಆತನು ಹೇಳಿದನು. ಗ್ರೀಕ್ ರಚನೆಯು (ಪರ್ಫೆಕ್ಟ್ ಪಾರ್ಟಿಸಿಫಲ್) ಪರಲೋಕವು ತೆರೆಯಲ್ಪಡಲಿಕ್ಕಿತ್ತು ಮತ್ತು ತೆರೆದು ಇರುವುದು ಎಂಬುದನ್ನು ತೋರಿಸುತ್ತದೆ; ಅದು ತೆರೆದು ಇಡಲ್ಪಡಬೇಕಾಯಿತ್ತು. ಯೇಸುವು ನಜರೇತಿನಿಂದ ಒಬ್ಬಾತನು, ಪರಲೋಕಕ್ಕೂ ಭೂಲೋಕಕ್ಕೂ ಮಧ್ಯದಲ್ಲಿಯ

ಸಂಬಂಧವನ್ನು ಎಂದೆಂದಿಗೂ ಬದಲಾಯಿಸುತ್ತೇನೆಂದು ಹೇಳಿದನು. ಆತನು ನತಾನಯೇಲನಿಗೆ ಪರಲೋಕದ ಇಣುಕುನೋಟವನ್ನು ವಾಗ್ದಾನ ಮಾಡಲಿಲ್ಲ. ಆದರೆ ಪರಲೋಕದ ಮಹಿಮೆಯು ಎಂದೆಂದಿಗೂ ತನ್ನಲ್ಲಿ ಪ್ರಕಟವಾಯಿತು ಎಂದು ಆತನು ಹೇಳಿದನು, ಆಗ ಯೇಸುವು ತನನ್ನು "ಮನುಷ್ಯಕುಮಾರನಂತೆ" ಅದು ಆತನ ಮೆಚ್ಚಿಕೆಯನ್ನು ಸ್ವಯಂವಿವರಣೆ ಸುವಾರ್ತೆಗಳಲ್ಲಿತ್ತು, ಉಲ್ಲೇಖಿಸಿದನು, ಈ ಆಸಕ್ತಿಯುಳ್ಳ ವ್ಯಕ್ತಪಡಿಸುವಿಕೆಗೆ ಬಹಳವಾದ ಹಳೇ ಒಡಂಬಡಿಕೆಯ ಹಿನ್ನಲೆಯಿತ್ತು. ಯೇಸುವು ಅದನ್ನು ಪ್ರಾಥಮಿಕವಾಗಿ ಉಪಯೋಗಿಸಿದಂತೆ ತೋರುತ್ತದೆ ಯಾಕಂದರೆ ಅದು ಆತನ ದಿನದಿಂದ ಸಾಮಾನ್ಯ ತಪ್ಪಾದ ಉಪಯೋಗದಿಂದ ಕಳಂಕ ಹೊಂದಿರದ ಪ್ರವಾದಿಕ ಭಾಷೆಯ ಒಂದು ತುಣುಕಾಗಿತ್ತು, "ಮೆಸ್ಸೀಯ" ಹಾಗೂ "ಇಸ್ರಾಯೇಲಿನ ರಾಜ" ಎಂಬ ಎರಡಕ್ಕೂ ಮಿಲಿಟರಿ ಅರ್ಥವಿದ್ದು ಆತನು ತನ್ನನ್ನು ಅದಕ್ಕೆ ಅನ್ವಯಿಸಲು ಬಯಸಲಿಲ್ಲ, ಮತ್ತು ಇತರ ಎಲ್ಲಾ ಹುದ್ದೆಗಳು ನಜರೇತಿನ ಯೇಸುವು ಯಾರು ಮತ್ತು ಏನಾಗಲಿಕ್ಕೆ ಬಂದನು ಎಂಬುದಕ್ಕೆ ಭಾಗಶಃ ವಿವರಣೆಗಳಾಗಿದ್ದವು. ಆದುದ್ದರಿಂದ, ಯೇಸುವು ತನ್ನನ್ನು "ಮನುಷ್ಯ ಕುಮಾರನು" ಎಂದು ಕರೆದುಕೊಂಡನು. ಈ ಮಾತು ಒಂದೇ ಸಮಯದಲ್ಲಿ ಆತನ ದೈವತ್ವವನ್ನು ಮತ್ತು ಮಾನವತೆಯನ್ನು ತೋರಿಸಿತು. ಹೀಗೆ ಯೇಸುವು ಆತನು ಪ್ರವಾದಿಗಳು ತೋರಿಸಿದಾತನು ಎಂಬ ವಿಚಾರವನ್ನು ವ್ಯಕ್ತಪಡಿಸಲು ಅದು ಬಿಟ್ಟಿತು. ಅದೇ ಸಮಯದಲ್ಲಿ ತನ್ನ ಸ್ವಂತ ಮಾತುಗಳಲ್ಲಿ ತನ್ನನ್ನು ಗುರುತಿಸಿಕೊಳ್ಳಲು ಯೇಸುವಿಗಾಗಿ ಸ್ಥಳಾವಕಾಶ ಮಾಡಿ ಕೊಟ್ಟಿತು.

## ಮುಕ್ತಾಯ

ನಾವು ಯೋಹಾನನ ಸುವಾರ್ತೆಯ ಪ್ರಾರಂಭದಲ್ಲಿ ನಿಂತಿರುವಂತೆ, "ಇದಕ್ಕಿಂತ ಹೆಚ್ಚಿನ ಕಾರ್ಯಗಳನ್ನು ನೋಡುವಿ" ಎಂಬ ಮಾತುಗಳು ನಮಗೂ ಅನ್ವಯಿಸುತ್ತವೆ. ಅನೇಕ ವರ್ಷಗಳಿಂದ ನಾವು ಯೇಸುವನ್ನು ತಿಳಿದವರಾಗಿದ್ದರೂ, ಇವುಗಳಿಗಿಂತ ಹೆಚ್ಚು ದೊಡ್ಡ ಸಂಗತಿಗಳನ್ನು ನೋಡುವೆವು. ನಾವು ಆರು ವಾರ ವಯಸ್ಸಿನವರಾಗಿದ್ದಾಗಿನಿಂದ ನಾವು ಬೈಬಲ್ ಕ್ಲಾಸುಗಳಿಗೆ ಹೋಗಿದ್ದರು ಇದಕ್ಕಿಂತ ಹೆಚ್ಚು ದೊಡ್ಡ ಸಂಗತಿಗಳನ್ನು ನೋಡುವೆವು. ಕ್ರೈಸ್ತ ಶಾಲೆಗಳಿಂದ ಬೈಬಲ್ ಪದವಿಗಳಿದ್ದರೂ, ನಾವು ಇವುಗಳಿಗಿಂತ ಹೆಚ್ಚು ದೊಡ್ಡ ಸಂಗತಿಗಳನ್ನು ನೋಡುವೆವು. ನಜರೇತಿನ ಯೇಸುವಿನ ಕಡೆಗೆ ನಾವು ಪುನಃ ಪ್ರತಿಸಲ ನೋಡುವಾಗ, ಪರಲೋಕವು ತೆರೆದಿರುವುದನ್ನು ನಾವು ನೋಡುವೆವು.

ಯಾವುದೇ ಸಂಬಂಧದಲ್ಲಿ ಇರುವ ಅತೀ ದೊಡ್ಡಗಂಡಾಂತರಗಳಲ್ಲಿ ಒಂದು ಒಬ್ಬ ವ್ಯಕ್ತಿಯು ಇನ್ನೊಬ್ಬನ ಬಗ್ಗೆ ಕಲಿಯುವುದನ್ನು ನಿಲ್ಲಿಸುವುದಾಗಿದೆ, ನೀನು ಇನ್ನೋಬ್ಬ ವ್ಯಕ್ತಿಯನ್ನು "ಒಳಗೂ ಹೊರಗೂ" ತಿಳಿದಿದ್ದೇನೆ ಎಂದು ಯೋಚಿಸುವುದು ಒಂದು ಒರಟಾದ ಎಚ್ಚರಿಸುವಿಕೆಗೆ ನಿನ್ನನ್ನು ಇಟ್ಟುಕೊಳ್ಳುವುದಾಗಿರುತ್ತದೆ. ಯಾವುದೇ ಸಂಬಂಧದ ಜೀವಿತವು ಮುಂದುವರೆಯುವಲ್ಲಿ, ಪರಸ್ಪರ ಕಂಡುಕೊಳ್ಳುವಿಕೆಗಳಲ್ಲಿ ಕಂಡು ಬರುತ್ತದೆ. ತಮ್ಮ ಜೀವನವೆಲ್ಲಾ ಒಬ್ಬರು ಇನ್ನೊಬ್ಬರನ್ನು ತಿಳಿದು ಕೊಂಡವರು ಇಲ್ಲವೇ ಐವತ್ತಕ್ಕಿಂತಲೂ ಹೆಚ್ಚು ವರ್ಷಗಳವರೆಗೆ ಒಂದಾಗಿದ್ದವರು, ಪರಸ್ಪರರು ಕಲಿತು ಕೊಳ್ಳಲಿಕ್ಕೆ ಇನ್ನೂ ಬಹಳಷ್ಟು ಇರುತ್ತದೆ. ಯೇಸುವಿನ ಬಗ್ಗೆ ನೀವು ಆ ರೀತಿಯಲ್ಲಿ ಭಾಮಿಸುವಿರೋ?

ನಾವು ಅಧ್ಯಯನ ಮಾಡಿದ ಪಠ್ಯವು ನಮ್ಮ ಕ್ರೆಯೊನಗಳ ಬಾಕ್ಸ್ ಬಹಳ ಚಿಕ್ಕದಾಗಿದೆಯೆಂದು ನಮ್ಮ ಜ್ಞಾಪಕಕ್ಕೆ ತರುತ್ತದೆ: ಯೇಸುವಿನ ಲಕ್ಷಣ ನಿರೂಪಿಸಲು ನಮಗಿರುವ ವಿಧಾನಗಳು ಯಾವಗಲು ಸಾಕಾದಷ್ಟುವುಗಳಾಗಿರುವುದಿಲ್ಲ. ಇದನ್ನು ಗ್ರಹಿಸಿಕೊಂಡು ಆತನನ್ನು ಹುಡುಕುವದನ್ನು ನೀವು ಮುಂದುವರಿಸುವಿರೋ? ಆತನು ನಿನ್ನನ್ನು ಆಶ್ಚರ್ಯಬಲಿತನನ್ನಾಗಿ ಮಾಡುಲು ಬಿಡುವಂತೆ ಮುಂದುವರಿಯುವಿಯೋ? ಆತನು ಕೆಲವು ಸಲ ನಿನ್ನನ್ನು ಗದರಿಸುವನು ಹಾಗು ನಿನ್ನ ಆರಾಮದಾಯಕ ಊಹೆಗಳನ್ನು ಆಹ್ವಾನಿಸುವನು

ಎಂಬುದನ್ನು ತಿಳಿದುಕೊಂಡು, ಆತನ ಬಗ್ಗೆ ಓದುವದನ್ನು ಮುಂದುವರಿಸುವಿಯೋ? ಆತನು ಯಾರಾಗಿರತಕ್ಕದ್ದು ಎಂಬ ನಿನ್ನ ರೂಪಕ್ಕೆ ಯೇಸುವು ಹೊಂದಿಕೊಂಡಿರುವನೆಂದು ಒತ್ತಿ ಹೇಳದೇ, ಯೇಸುವು ತನ್ನ ಕೃತ್ಯಗಳಿಂದ ಮತ್ತು ಮಾತುಗಳಿಂದ ತನ್ನನ್ನೂ ನಿರೂಪಿಸುವಂತೆ ಬಿಡಲು ಮುಂದುವರಿಯುವಿಯೋ? ಜೀವನದಲ್ಲಿ ಇಂದು ನೀನು ಎಲ್ಲಿಯೇ ಇದ್ದರೂ, ಈ ಸುವಾರ್ತೆಯಲ್ಲಿ ಯೇಸುವನ್ನು ನೋಡುವದನ್ನು ಮುಂದುವರಿಸಿದರೆ "ಇವುಗಳಿಗಿಂತ ಹೆಚ್ಚು ದೊಡ್ಡ ಸಂಗತಿಗಳನ್ನು ನೀನು ನೋಡುವಿ."

ಯೇಸುವು ಫಿಲಿಪ್ಪನನ್ನು ಕರೆದಾಗ, "ನನ್ನನ್ನು ಹಿಂಬಾಲಿಸು" ಎಂದಷ್ಟೇ ಹೇಳಿದನು. ಫಿಲಿಪ್ಪನ ಜೀವನದಲ್ಲಿಯ ಆ ಹಂತದಲ್ಲಿ ಯೇಸುವಿನ ಬಗ್ಗೆ ಅವನು ತಿಳಿಯದೇ ಇದ್ದಂಥದ್ದು ಬಹಳ ಇತ್ತು. ಅವನು ಏನನ್ನು ಅರ್ಥಮಾಡಿಕೊಂಡಿದ್ದಿಲ್ಲ. ಹೀಗಿದ್ದರೂ ಅವನು ಹಿಂಬಾಲಿಸಿದನು - ಮತ್ತು ಹಿಂಬಾಲಿಸಿದ್ದರಲ್ಲಿ ಅವನು ಕ್ರಮೇಣವಾಗಿ ಯೇಸುವು ಯಾರಾಗಿದ್ದಾನೆ ಎಂಬುದನ್ನು ನೋಡಿದನು. ನಾವು ಯೇಸುವನ್ನು ಅರ್ಥಮಾಡಿಕೊಳ್ಳಲು ಬಯಸಿದರೆ, ಆತನನ್ನು ಹಿಂಬಾಲಿಸಲು ಸಿದ್ಧರಾಗಿರತಕ್ಕದ್ದು; ಹಿಂಬಾಲಿಸುವುದರಲ್ಲಿ ನಾವು ಅರ್ಥಮಾಡಿಕೊಳ್ಳುತ್ತೇವೆ.

---

ಟಿಪ್ಪಣಿಗಳು

[1]Patricia MacLachlan, *Sarah, Plain and Tall* (New York: Harper Trophy, 1985), 15. [2]ನೋಡಿರಿ, ಅಪೊಸ್ತಲರ ಕೃತ್ಯಗಳು 21:38. [3]"ಯೆಹೂದ್ಯರು" ಎಂಬ ವ್ಯಕ್ತಪಡಿಸುವಿಕೆಯನ್ನು ಈ ಸುವಾರ್ತೆಯಿಂದ ಪ್ರಸಂಗಿಸುವಾಗ ಜಾಗರುಕತೆಯಿಂದ ನಿರೂಪಿಸಬೇಕು. ಸ್ಪಷ್ಟವಾಗಿ, ಇದು ಇಡೀ ಒಂದು ಕುಲಕ್ಕೆ ಉಲ್ಲೇಖವಾಗಿರುವುದಿಲ್ಲ, ಯೇಸುವು ಆತನ ಶಿಷ್ಯರೂ ಯೆಹೂದ್ಯರಾಗಿದ್ದರು. "ಯೆಹೂದ್ಯರನ್ನು" "ಯೆರೂಷಲೇಮಿನ ಯೆಹೂದಿ ನಾಯಕರು" ಎಂದು ವಿವರಿಸುವುದು ಚೆನ್ನಾಗಿ ಕಾಣುತ್ತದೆ. ಯಾವ ಪ್ರವಾದಿಯಾದರು ಜನರನ್ನು ದಂಗೆಯೇಳಲು ಪ್ರಚೋದಿಸಿದರೆ ಅವರು ಅತೀ ಹೆಚ್ಚು ನಷ್ಟ ಹೊಂದುವವರಾಗಿದ್ದರು. [4]ನೋಡಿರಿ, ಮಲಾಕಿ 4:5. ಮತ್ತಾಯ 11:14ರಲ್ಲಿ ಸ್ನಾನಿಕನಾದ ಯೋಹಾನನು ಮಲಾಕಿಯಲ್ಲಿ ಹೇಳಲ್ಪಟ್ಟ ಎಲೀಯನೆಂದು ಯೇಸುವು ಹೇಳಿದನು. ಯೋಹಾನ 1:21ರಲ್ಲಿ ಸ್ನಾನಿಕನಾದ ಯೋಹಾನನು ತನ್ನ ಬಗ್ಗೆ ಯೇಸುವು ಹೇಳಿದ್ದಕ್ಕೆ ವ್ಯತಿರಿಕ್ತವಾಗಿ ಹೇಳುತ್ತಿರುವದಿಲ್ಲ, ಆದರೆ ಸತ್ತವರೊಳಗಿಂದ ಎದ್ದು ಬಂದ ಹಳೇ ಒಡಂಬಡಿಕೆಯ ಪ್ರವಾದಿ ಎಲೀಯ ತಾನಾಗಿದ್ದೇನೆಂಬ ಅಕ್ಷರಶಃ ವಿಚಾರವನ್ನು ಅಲ್ಲಗಳೆಯುತ್ತಿದ್ದಾನೆ. [5]ಅಂದ್ರೇಯನು ಸುವಾರ್ತೆಗಳಲ್ಲಿ ಒಂದು ಮೌನ ಪಾತ್ರದಂತೆ ಚಿತ್ರಿಸಲ್ಪಟ್ಟಿದ್ದಾನೆ; ಆದಾಗ್ಯೂ ಯೋಹಾನನ ಸುವಾರ್ತೆಯಲ್ಲಿ ಅವನು ಕಾಣಿಸಿಕೊಳ್ಳುವ ಎಲ್ಲಾ ಮೂರು ಸಮಯಗಳಲ್ಲಿ, ಅವನು ಯಾರನ್ನಾದರೂ ಯೇಸುವಿನ ಬಳಿಗೆ ತರುತ್ತಿರುತ್ತಾನೆ. ಮೊದಲನೆಯವನು ಪೇತ್ರನು (1:41, 42); ಆ ಮೇಲೆ ರೊಟ್ಟಿ ಮೀನುಗಳಿದ್ದ ಬಾಲಕನು (6:8, 9); ಅಂತಿಮವಾಗಿ, ಗ್ರೀಕರು (12:20-22).